**ಸಿ. ಸಿ. ನಂ.36/2017 ಪಿ.ಡಬ್ಲ್ಯೂ- 3 ಹೆಸರು -ಮಹದೇವ ಪ್ರಸಾದ್**

**ಸಾಕ್ಷಿಯನ್ನು ದಿನಾಂಕಃ 03.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ ಎಲ್ ಬಿ ವಕೀಲರಿಂದಃ-**

ಗಲಾಟೆಯು ದಿನಾಂಕ 22.06.2016 ರಂದು ಸಂಜೆ 05.00 ರಿಂದ 05.30 ಗಂಟೆಗೆ ನಡೆದಿರುತ್ತದೆ. ಗಲಾಟೆಯ ಕಾಲಕ್ಕೆ ಸುಮಾರು 25 ರಿಂದ 30 ಜನ ಇದ್ದರು. ನನಗೆ ರಕ್ತ ಗಾಯ ಆಗಿರಲಿಲ್ಲ, ಒಳ ನೋವು ಆಗಿತ್ತು. ನಾನು ಅದೇ ದಿನ ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ತೆಗೆ ಹೋಗಿದ್ದು, ಮರು ದಿನ ಬೆಳಗ್ಗೆ ನಂಜನಗೂಡಿನ ಆಸ್ಪತ್ರೆಗೆ ಹೋಗಿದ್ದೆನು. ನಾನು ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಯ ವೈದ್ಯರ ಬಳಿ ಆರೋಪಿತರು ಹಲ್ಲೆ ಮಾಡಿದ್ದರು ಎಂದು ಹೇಳಿದ್ದೆನು. ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ನಾನು ಮತ್ತು ಚಾಸಾ 2 ರವರು ಒಟ್ಟಿಗೆ ಹೋಗಿದ್ದೆನು. ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ನಾನು, ನನ್ನ ತಂದೆ, ಚಾಸಾ6 ಮತ್ತು ಚಾಸಾ 1 ರವರು ಹೋಗಿದ್ದೆವು. ನಮ್ಮ ಊರಿನಿಂದ ನೇರವಾಗಿ 04 ಜನ ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋದೆವು. ಆಸ್ಪತ್ರೆಯಿಂದ ಕಾರ್ಯ ಹಳ್ಳಿಯಲ್ಲಿರುವ ನನ್ನ ಅಕ್ಕನ ಮನೆಗೆ ಹೋದೆವು. ಆ ದಿನ ರಾತ್ರಿ ನಾನು, ಚಾಸಾ 1 ಮತ್ತು 2 ರವರು ಕಾರ್ಯ ಗ್ರಾಮದಲ್ಲಿಯೇ ಇದ್ದೆವು. ನನ್ನ ತಂದೆ ಊರಿಗೆ ವಾಪಸ್ಸು ಹೋದರು.

2. ಆರೋಪಿತನ ಬಳಿ ನಮ್ಮನ್ನು ಕ್ರಿಕೆಟ್ ಆಟಕ್ಕೆ ಸೇರಿಸಿಕೊಳ್ಳುವಂತೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ 2 ರವರಿಗೆ ಕ್ರಿಕೆಟ್ ಬ್ಯಾಟಿನಿಂದ ಬಲ ತೋಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ಚಾಸಾ 2 ರವರ ಬಲ ಪಾದಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನನಗೆ 1 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ಎಡಭುಜಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನಗೆ ಮುದ್ದೆ ಮಾಲು 1 ರ ಬ್ಯಾಟಿನಿಂದ ಕಾಲಿಗೆ ಮತ್ತು ತೋಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಗಲಾಟೆಯನ್ನು ಚಾಸಾ 5, 9 ಮತ್ತು 8 ರವರು ಬಿಡಿಸಿದ್ದರು. 4 ಮತ್ತು 5 ನೇ ಆರೋಪಿತರು ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 6 ರವರು ನನ್ನನ್ನು ಮತ್ತು ಚಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ನಡುವೆ ಹಳೆ ದ್ವೇಷ ಇತ್ತು ಎಂಬುದರ ಕುರಿತು ನನಗೆ ಗೊತ್ತಿಲ್ಲ. ಆರೋಪಿತರನ್ನೇ ಕೇಳಬೇಕು ಎಂದು ಹೇಳುತ್ತಾರೆ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ನನಗೆ ಎಡ ಬೆನ್ನಿನ ಎಡ ಭಾಗಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ.

3. ನಮ್ಮ ಮತ್ತು ಆರೋಪಿತರ ಕುಟುಂಬದ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ. ಚಾಸಾ 2 ಮತ್ತು ಆರೋಪಿತರ ಕುಟುಂಬದ ನಡುವೆ ವೈಮನಸ್ಸು ಇತ್ತು. ನಮ್ಮ ಮತ್ತು ಆರೋಪಿತರ ನಡುವೆ ಭಿನ್ನಾಭಿಪ್ರಾಯವಿದ್ದು, ಆ ಕಾರಣದಿಂದ ನಾವು ಚಾಸಾ 1 ರವರ ಮೂಲಕ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿಯನ್ನು ಕರೆಸಿದ್ದರು, ಆದರೆ ಆರೋಪಿತರು ಬರಲಿಲ್ಲ. ಪಂಚಾಯಿತಿ ಕಾಲಕ್ಕೆ ಸುಮಾರು 7-8 ಜನರು ಇದ್ದರು. ಗೌಡಿಕೆ ಮಲ್ಲಪ್ಪರವರು ಇದ್ದರು. ಪಂಚಾಯಿತಿಯನ್ನು ಗೌಡಿಕೆ ಮಲ್ಲಪ್ಪರವರು ಸೇರಿಸಿದ್ದರು. ನಮ್ಮ ಮತ್ತು ಆರೋಪಿತರು ನಡುವೆ ಯಾವುದೇ ಗಲಾಟೆ ನಡೆಯದಿದ್ದಾಗ್ಯೂ ಹಾಗೂ ಸದರಿ ಗಲಾಟೆಯ ಕುರಿತು ಯಾವುದೇ ಪಂಚಾಯಿತಿ ಮಾಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ಬಿದ್ದು ಗಾಯ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**